ಆ) ರಾಜ್ಯದ ಪ್ರಸ್ತುತ ಆರ್ಥಿಕ ಪರಿಸ್ಥಿತಿಯು ತೃಪ್ತಿಕರವಾಗಿದೆ ಹಾಗೂ ಮಹಾಲೇಖಪಾಲರು ಇತ್ತೀಚೆಗೆ ನೀಡಿರುವ ಹಣಕಾಸಿನ ವ್ಯವಹಾರದ ಲೆಕ್ಕ ಪತ್ರ ಮಾಸಿಕ ವರದಿಯ ಪ್ರಕಾರ ರಾಜ್ಯದ ಬೊಕ್ಕಸಕ್ಕೆ ಜೂನ್ 91ರ ತಿಂಗಳ ಅಂತ್ಯದವರೆಗೆ ಶೇಖರಣೆಯಾದ ರಾಜಸ್ವ ಹಣ 912.28 ಕೋಟಿ ರೂಗಳು.

ಇ) ಸರ್ಕಾರವು ಯೋಜಿಸಿದ ಹಾಗೂ ಆಯ ವ್ಯಯದಲ್ಲಿ ತೋರಿಸಿದ ಯೋಜನೆಗಳನ್ನು ಕಾರ್ಯಗತ ಮಾಡುವಲ್ಲಿ ಬೇಕಾಗುವ ಸಂಪನ್ಮೂಲವನ್ನು ಕ್ರೂಢೀಕರಿಸುವ ಎಲ್ಲಾ ಪ್ರಯತ್ನಗಳನ್ನು ಮಾಡುತ್ತಿದೆ.

ಹೈದರಾಬಾದ್ ಕರ್ನಾಟಕ ಅಭಿವೃದ್ಧಿ

2116 - ಶ್ರೀ ಬಿ.ಎಸ್. ಯಡಿಯೂರಪ್ಪ (ಶಿಕಾರಿಪುರ) : ಮಾನ್ಯ ಯೋಜನಾ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

1. ಹೈದರಾಬಾದ್ ಕರ್ನಾಟಕ ಅಭಿವೃದ್ಧಿ ಮಂಡಳಿಗೆ 50ಕೋಟಿ ಹಣವನ್ನು ಹಿಂದಿನ ವರ್ಷ ನೀಡಿದ್ದು ನಿಜವೇ?

2. ಕಳೆದ 2 ವರ್ಷದ ಅವಧಿಯಲ್ಲಿ ಈ 50 ಕೋಟಿಯಲ್ಲಿ ಖರ್ಚಾದ ಹಣವೆಷ್ಟು?

ಶ್ರೀಮತಿ ಕೆ.ಎಸ್. ನಾಗರತ್ನಮ್ಮ (ಯೋಜನೆ, ಸಾಂಖ್ಯಿಕ ಹಣಕಾಸು ಮತ್ತು ಸಾಂಖ್ಯಿಕ ಮಂತ್ರಿಗಳು) :

1) ಹೌದು.

2) 1990-91ರಲ್ಲಿ ಹಣವನ್ನು ಪೂರ್ಣವಾಗಿ ಉಪಯೋಗಿಸಲಾಗಿದೆ. 1991-92ನೇ ಸಾಲಿನಲ್ಲಿ ಅಯವ್ಯಯದಲ್ಲಿ ಉದ್ದೇಶಿಸಲಾಗಿರುವ 50 ಕೋಟಿ ರೂಗಳಲ್ಲಿ ಒಟ್ಟು 10-97 ಕೋಟಿ ರೂಗಳನ್ನು ಮೊದಲು 4 ತಿಂಗಳಲ್ಲಿ ವೆಚ್ಚಮಾಡಲಾಗಿದೆ.

ಸರ್ಕಾರಿ ಮನೆಗಳ ಬಗ್ಗೆ

2092-ಶ್ರೀ ವಾಟಾಳ್ ನಾಗರಾಜ್ (ಚಾಮರಾಜನಗರ) : ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮುಖ್ಯ ಮಂತ್ರಿಗಳು, ಮಂತ್ರಿಗಳು ಹಾಗೂ ರಾಜ್ಯ ಮಂತ್ರಿಗಳು ಯಾರ್ಯಾರು ಸರ್ಕಾರಿ ಮನೆಗಳಲ್ಲಿ ವಾಸಿಸುತ್ತಿದ್ದಾರೆ.

ಆ) ಅವರುಗಳಿಗೆ ಒದಗಿಸಲಾಗಿರುವ ಪೀಠೋಪಕರಣಗಳಿಗೆ ತಗುಲಿರುವ ಒಟ್ಟು ವೆಚ್ಚ ಎಷ್ಟು? (ಎಲ್ಲಾ ಮಂತ್ರಿಗಳ ವಿವರಗಳನ್ನು ಪ್ರತ್ಯೇಕವಾಗಿ ಒದಗಿಸುವುದು)?

ಶ್ರೀ ಎಸ್. ಬಂಗಾರಪ್ಪ (ಮುಖ್ಯಮಂತ್ರಿಗಳು):

ಅ) ಮತ್ತು ಆ) ಅನುಬಂಧದಲ್ಲಿ ವಿವರಿಸಲಾಗಿದೆ.